# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೨೩, ಸೆಪ್ಟೆಂಬರ್, ೨೦೨೧(ಆಶ್ವಯುಜ, ೦೧, ಶಕವರ್ಷ, ೧೯೪೩)<br>BENGALURU, THURSDAY, 23, SEPTEMBER, 2021(ASHWAYUJA, 01, SHAKAVARSHA, 1943) | ನಂ. ೭೯೨<br>No. 792 |
|---|---|---|

**ಕರ್ನಾಟಕ ಸರ್ಕಾರ**

ಸಂಖ್ಯೆ: HD/41/PPA/2021 PS_B

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:23.09.2021

**ಅಧಿಸೂಚನೆ**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಲಾದ, 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ (ವಿಧಿ ವಿಜ್ಞಾನ ಪ್ರಯೋಗಾಲಯ ಸೇವೆಗಳು) (ನೇಮಕಾತಿ) ನಿಯಮಗಳು, 2017ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಉದ್ದೇಶದಿಂದ ಈ ಕೆಳಗಿನ ನಿಯಮಗಳ ಕರಡನ್ನು ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡು ನಿಯಮಗಳನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ 15 ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಮೇಲೆ ನಿಗದಿಪಡಿಸಿದ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಯಾರೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದು.

**ಕರಡು ನಿಯಮಗಳು**

1. **ಹೆಸರು ಮತ್ತು ಪ್ರಾರಂಭ :–** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ (ವಿಧಿ ವಿಜ್ಞಾನ ಪ್ರಯೋಗಾಲಯ ಸೇವೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅವು ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದು.

**2. ಅನುಸೂಚಿ 1ಕ್ಕೆ ತಿದ್ದುಪಡಿ** :– 1. ಕರ್ನಾಟಕ ರಾಜ್ಯ (ವಿಧಿ ವಿಜ್ಞಾನ ಪ್ರಯೋಗಾಲಯ ಸೇವೆಗಳು) (ನೇಮಕಾತಿ) ನಿಯಮಗಳು, 2017ರ (ಇನ್ನು ಮುಂದೆ ಸದರಿ ನಿಯಮಗಳನ್ನು ಉಲ್ಲೇಖಿಸಲಾಗಿದೆ) ಅನುಸೂಚಿ 1ರ ಕ್ರಮ ಸಂಖ್ಯೆ 43ರ ನಂತರ ಈ ಮುಂದಿನವುಗಳನ್ನು ಸೇರಿಸಲಾಗಿದೆ, ಎಂದರೆ:–

| 1 | 2 | 3 | 4 | 5 |
|---|---|---|---|---|
| 43(ಎ) | **ಸೀನ್ ಆಫ್ ಕ್ರೈಂ ಆಫೀಸರ್ (ಸೋಕೋ) (37900 – 70850)** | 206 | **ನೇರ ನೇಮಕಾತಿಯ ಮೂಲಕ** | ನೇರ ನೇಮಕಾತಿಗಾಗಿ :–<br>ಕಾನೂನಿನ ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾನಿಲಯದಿಂದ ವಿಧಿ ವಿಜ್ಞಾನದ ವಿಷಯದಲ್ಲಿ ಕನಿಷ್ಠ ಶೇಕಡ 55 ರಷ್ಟು ಅಂಕಗಳೊಂದಿಗೆ ಪದವಿಯನ್ನು ಹೊಂದಿರತಕ್ಕದ್ದು.<br>**ಅಥವಾ**<br>ಕಾನೂನಿನ ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾನಿಲಯದಿಂದ ವಿಜ್ಞಾನದ ವಿಷಯದಲ್ಲಿ ಕನಿಷ್ಠ ಶೇಕಡ 55 ರಷ್ಟು ಅಂಕಗಳೊಂದಿಗೆ ಪದವಿಯನ್ನು ಹೊಂದಿರತಕ್ಕದ್ದು. ಹಾಗೂ ಜೊತೆಗೆ ಮಾನ್ಯತೆ ಪಡೆದ ಸಂಸ್ಥೆಯಿಂದ ವಿಧಿ ವಿಜ್ಞಾನ ವಿಷಯದಲ್ಲಿ ಕನಿಷ್ಠ ಶೇಕಡ 55 ರಷ್ಟು ಅಂಕಗಳೊಂದಿಗೆ 01 ವರ್ಷ ಡಿಪ್ಲೊಮಾವನ್ನು ಹೊಂದಿರತಕ್ಕದ್ದು.<br>**ಅಥವಾ**<br>ಕಾನೂನಿನ ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾನಿಲಯದಿಂದ ವಿಜ್ಞಾನದ ವಿಷಯದಲ್ಲಿ ಕನಿಷ್ಠ ಶೇಕಡ 55 ರಷ್ಟು ಅಂಕಗಳೊಂದಿಗೆ ಪದವಿಯನ್ನು ಹೊಂದಿರತಕ್ಕದ್ದು. ಜೊತೆಗೆ ವಿಧಿ ವಿಜ್ಞಾನ ವಿಷಯದಲ್ಲಿ ಶೇಕಡ 55 ರಷ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು. |

**3. ಅನುಸೂಚಿ 2ಕ್ಕೆ ತಿದ್ದುಪಡಿ** :– ಸದರಿ ನಿಯಮಗಳ ಅನುಸೂಚಿ 2ರ ಕಂಡಿಕೆ 2ರಲ್ಲಿ **“**ಕ್ರಮ ಸಂಖ್ಯೆ: 31 ರಿಂದ 43**”** ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ **“**ಕ್ರಮ ಸಂಖ್ಯೆ: 31 ರಿಂದ 43 (ಎ)**”** ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ಯಾಮ ಹೊಳ್ಳ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ)

**GOVERNMENT OF KARNATAKA**

No.HD/41/PPA/2021 PS_B

Karnataka Government Secretariat
Vidhana Soudha,
Bengaluru, Dated: 23.09.2021

## NOTIFICATION

The draft of the following rules further to amend the Karnataka State (Forensic Science Laboratory Services) (Recruitment) Rules, 2017 which the Government of Karnataka proposes to make in exercise of powers conferred by the sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act for the information of persons likely to be affected thereby and notice is hereby given that the said draft will be taken into consideration after fifteen days from the date of its publication in the official Gazette.

Any objection or suggestion, which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Additional Chief Secretary to Government, Home Department, Vidhana Soudha, Bangalore-560 001.

### Draft Rules

1. **Title and commencement:- (1)** These rules may be called the Karnataka State (Forensic Science Laboratory Services) (Recruitment) (Amendment) Rules, 2021.

(2) They shall come into force from the date of their final publication in the Official Gazette.

**2. Amendment to schedule 1.-** In Schedule 1 of the Karnataka State (Forensic Science Laboratory Services) (Recruitment) Rules, 2017 (hereinafter referred to as the said rules) after serial no. 43, the following shall be inserted, namely:-

"

| 1 | 2 | 3 | 4 | 5 |
|---|---|---|---|---|
| **43(A)** | **Scene of Crime Officer (37900-70850)** | **206** | **By Direct Recruitment** | **For Direct Recruitment:-**<br>Must be holder of Bachelor Degree in Forensic Science with at least 55% aggregate marks from the University established by Law<br>**Or**<br>Must be a holder of Bachelor Degree in Science with at least 55% aggregate marks from the University established by Law with one year diploma in Forensic Science with at least 55% |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | |
|---|---|---|---|---|
| | | | | aggregate marks from recognized Institution. **Or** Must be a holder of Bachelor Degree in Science with at least 55% aggregate marks from the University established by Law with master degree in Forensic Science with at least 55% aggregate marks. |

"

2. **Amendment of schedule 2.-** In schedule 2 of the said rules, in paragraph 2 for the words and figures "at serial no. 31 to 43" the words and figures "at serial no. 31 to 43(A)" shall be substituted.

By order and in the name of the
Governor of Karnataka

**(G. Shyama Holla)**
Under Secretary to Government,
Department of Home (Police Services-B)

.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE
Date: 2021.09.23 17:39:16 +05'30'